ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1956 (2263)

ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮ ನಿರ್ದೇಶನ ಹೊಂದಿರುವವರು)

ಉತ್ತರಿಸಬೇಕಾದ ದಿನಾಂಕ : 21.03.2022

ಉತ್ತರಿಸುವವರು : ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಹೊಸಕೆರೆ ಹೋಬಳಿಯ ಇಜ್ಜಲಘಟ್ಟ ಗ್ರಾಮ ಗುಡಾಂಗಲ್‌ನ ಸರ್ವೆ ನಂ.105ರ ಈ ಪ್ರದೇಶವು ಅರಣ್ಯ ಇಲಾಖೆಯ ವ್ಯಾಪ್ತಿಗೆ ಒಳಪಡುವುದೇ;	ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು ಹೊಸಕೆರೆ ಹೋಬಳಿಯ ಇಜ್ಜಲಘಟ್ಟ ಗ್ರಾಮ ಗುಡಾಂಗಲ್‌ನ ಸರ್ವೆ ನಂ.105ರಲ್ಲಿ ಯಾವುದೇ ಅಧಿಸೂಚಿತ ಅರಣ್ಯ ಇರುವುದಿಲ್ಲ. ಆದರೆ, ಸದರಿ ಸರ್ವೆ ನಂಬರ್ ನಲ್ಲಿ 552-05 ಎಕರೆ-ಗುಂಟೆ ವಿಸ್ತೀರ್ಣದ ಪ್ರದೇಶವು ಪರಿಭಾವಿತ ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆ.
ಆ)	ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿ ಒಳಪಟ್ಟಿದ್ದರೆ, ಇದರ ವಿಸ್ತೀರ್ಣವೆಷ್ಟು; ಇಲಾಖೆಯು ಈ ಪ್ರದೇಶವನ್ನು ವಶಪಡಿಸಿಕೊಳ್ಳಲು ತೆಗೆದುಕೊಂಡಿರುವ ಕ್ರಮವೇನು;	ಇಜ್ಜಲಘಟ್ಟ ಗ್ರಾಮದ ಸರ್ವೆ ನಂ.105ರಲ್ಲಿ ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಒಟ್ಟು 552-05 ಎಕರೆ ವಿಸ್ತೀರ್ಣವನ್ನು ಗಡಿಗುರುತಿಸಿ ನಕಾಶೆ ತಯಾರಿಸಿ ಭೌತಿಕವಾಗಿ ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ ವಹಿಸಿಕೊಟ್ಟಿರುವುದಿಲ್ಲವಾದ್ದರಿಂದ ಜಂಟಿ ಮೋಜಣಿ ಮಾಡಿ ನಿರ್ದಿಷ್ಟವಾಗಿ ನಕಾಶೆ ಮೂಲಕ ಹದ್ದುಬಸ್ತು ಗುರುತಿಸಿ ಕೊಡಲು ತಹಸೀಲ್ದಾರ್, ನಾಗಮಂಗಲ ತಾಲ್ಲೂಕು ರವರಿಗೆ ವಲಯ ಅರಣ್ಯಾಧಿಕಾರಿ, ನಾಗಮಂಗಲ ರವರು ಪತ್ರ ವ್ಯವಹರಿಸಿರುತ್ತಾರೆ.
ಇ)	ಒತ್ತುವರಿಯಾಗಿರುವ ಪ್ರದೇಶವೆಷ್ಟು ಒತ್ತುವರಿಯನ್ನು ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)	ಇಜ್ಜಲಘಟ್ಟ ಗ್ರಾಮ ಸರ್ವೆ ನಂ.105ರಲ್ಲಿ ಆಕಾರ್ ಬಂದ್‌ನ ವಿಸ್ತೀರ್ಣ 577.21 ಎಕರೆ ಇದ್ದು, ಈ ಪೈಕಿ ಅರಣ್ಯ ಇಲಾಖೆಗೆ ವರ್ಗಾಯಿಸಿರುವ 552-05 ಎಕರೆ ಡೀಮ್ಡ್ ಅರಣ್ಯ ಪ್ರದೇಶವನ್ನು ಗಡಿ ಗುರುತು ಮಾಡದೆ ಇರುವ ಕಾರಣ ಸದರಿ ಸರ್ವೆ ನಂಬರ್ ನಲ್ಲಿರುವ ಒತ್ತುವರಿ ಪ್ರದೇಶಗಳು ಡೀಮ್ಡ್ ಅರಣ್ಯ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆಯೇ ಅಥವಾ ಇಲ್ಲವೇ ಎಂಬುವುದನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗಿರುವುದಿಲ್ಲ. ಈ ಬಗ್ಗೆ ಅರಣ್ಯ ಇಲಾಖೆಗೆ ವರ್ಗಾಯಿಸಿರುವ ಜಮೀನನ್ನು ಜಂಟಿ ಮೋಜಣಿ ಮಾಡಿ ಹದ್ದುಬಸ್ತು ಗುರುತಿಸಿ ಕೊಡುವಂತೆ ತಹಶೀಲ್ದಾರ್ ನಾಗಮಂಗಲ ರವರಿಗೆ ವಲಯ ಅರಣ್ಯಾಧಿಕಾರಿ, ನಾಗಮಂಗಲ ವಲಯ ರವರು ಪತ್ರ ವ್ಯವಹಾರ ಮಾಡಿರುತ್ತಾರೆ.
ಈ)	ಸದರಿ ಜಮೀನು ಅರಣ್ಯ ಪ್ರದೇಶವೆಂದು ಘೋಷಿಸಿರುವ ಬಗ್ಗೆ ರಾಜ್ಯ ಪತ್ರ ಆಗಿದೆಯೇ? (ಆಗಿದ್ದಲ್ಲಿ ಅದರ ಪ್ರತಿಯನ್ನು ನೀಡುವುದು)	ಸದರಿ ಜಮೀನು ಅರಣ್ಯ ಪ್ರದೇಶವೆಂದು ಘೋಷಿಸಿರುವ ಬಗ್ಗೆ ರಾಜ್ಯ ಪತ್ರದಲ್ಲಿ ಅಧಿಸೂಚಿಸಿರುವುದಿಲ್ಲ.

ಸಂಖ್ಯೆ: ಅಪಜೀ 42 ಎಫ್ಎಫ್ 2022

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು